ಅಸಲು ದಾವ ಸಂಖ್ಯೆ: **902 /2015**

ಪಿಡಬ್ಲ್ಯೂ.1

**ಸಾಕ್ಷಿಯನ್ನು ದಿಃ 07-02-2019 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ.**

ನಾನು ಈ ದಾವೆಯ 2 ನೇ ವಾದಿ ಇರುತ್ತೇನೆ, ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತದೆ.

ಕಾಕತಿ ಗ್ರಾಮದ ಸರ್ವೆ ನಂ. 131 ಪ್ಲಾಟ ನಂ. 115, 116,117,118,119 ರ ಪೈಕಿ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು, ಕಾಕತಿ ಗ್ರಾಮದ ಸರ್ವೆ ನಂ. 130 ರ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 2 ಎಂದು, ಸರ್ವೆ ನಂ. 130 ಕ್ಕೆ ಸಂಬಂಧಿಸಿದಂತೆ 1989/90 ರಿಂದ 2001/02 ರವರೆಗಿನ ಎರಡು ಪಹಣಿ ಪತ್ರಿಕೆಗಳ ದೃಡಿಕೃತ ನಕಲನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು, ಕಾಕತಿ ಗ್ರಾಮದ ಸರ್ವೆ ನಂ. 130 ರ 2014/15 ನೇ ಸಾಲೀನ ಪಹಣಿ ಪತ್ರಿಕೆ ಹಾಜರು ಪಡಿಸಿದ್ದು ಅದನ್ನು ನಿಪಿ 5 ಎಂದು, ಗ್ರಾಮ ಪಂಚಾಯಿತಿ ಕಾಕತಿ ಇವರು ನೀಡಿರುವ ಎರಡು ಉದ್ಯೋಗ ಲೈಸೆನ್ಸ್ ಹಾಜರು ಪಡಿಸಿದ್ದು ಅವುಗಳನ್ನು ನಿಪಿ 6 ಮತ್ತು 7 ಎಂದು, ದಿಃ 30.12.2006 ರಂದು ತಹಸಿಲ್ದಾರವರಿಗೆ ನೀಡಿದ ಅರ್ಜಿಯ ದೃಡಿಕೃತ ನಕಲು ಹಾಜರು ಪಡಿಸಿದ್ದು ಅದನ್ನು ನಿಪಿ 8 ಎಂದು, ಸಹಸಿಲ್ದಾರ ಕಾರ್ಯಲಯ ಇವರು ಮಾಹಿತಿ ಹಕ್ಕಿನಡಿ ನೀಡಿರುವ ಲೀಸ ಕಮ್ ಸೇಲ್ ಅಗ್ರಿಮೆಂಟ್ ನ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 9 ಎಂದು, ತಹಸಿಲ್ದಾರ ಬೆಳಗಾವಿ ಇವರು ಮಾಹಿತಿ ಹಕ್ಕಿನಡಿ ನೀಡಿರುವ ಭೂ ಸ್ವಾಧೀನ ಪ್ರಮಾಣ ಪತ್ರ, ತಿಳುವಳಿಕೆ ಚೀಟಿ, ತಪಾಸಣಾ ಪಟ್ಟಿ, ಮುಟೇಶನ್ ರಿಜಿಸ್ಟರ ಎಮ್ ಆರ್ ನಂ. 6173/2018, ನಿಯಮ 65 ರ ನೋಟಿಸ ಹಾಜರು ಪಡಿಸಿದ್ದು ಅವುಗಳನ್ನು ನಿಪಿ 10 ರಿಂದ 14 ಎಂದು, ದಿಃ 06.05.2014 ರ ಖರೀದಿ ಪತ್ರದ ದೃಡಿಕೃತ ನಕಲು ಹಾಜರು ಪಡಿಸಿದ್ದು ಅದನ್ನು ನಿಪಿ 15 ಎಂದು, ಅಭಿವೃದ್ದಿ ಅಧಿಕಾರಿಗಳು ಕೈಗಾರಿಕಾ ಪ್ರದೇಶಾಭಿವೃದ್ದಿ ಮಂಡಳಿ ಬೆಳಗಾವಿ ಇವರು ಮಾಹಿತಿ ಹಕ್ಕಿನಡಿಯಲ್ಲಿ ನೀಡಿರುವ ಅರ್ಜಿಗೆ ನೀಡಿರುವ ಉತ್ತರ ಹಾಜರು

ಪಡಿಸಿದ್ದು ಅದನ್ನು ನಿಪಿ 16 ಎಂದು, ಆರೋಗ್ಯ ಅಧಿಕಾರಿಗಳು ಮಹಾನಗರ ಪಾಲಿಕೆ ಬೆಳಗಾವಿ ಇವರು ದಿಃ 28.11.2014 ನೀಡಿರುವ ಅರ್ಜಿ ಹಾಜರು ಪಡಿಸಿದ್ದು ಅದನ್ನು ನಿಪಿ 17 ಎಂದು, ದಾವ ಸ್ವತ್ತಿಗೆ ಸಂಬಂಧಿಸಿದ ಎರಡು ಪ್ರಾಪರ್ಟಿ ಏಕ್ಸ್ಟ್ರಾಕ್ಟ ಹಾಜರು ಪಡಿಸಿದ್ದು ಅವುಗಳನ್ನು ನಿಪಿ 18 ಮತ್ತು 19 ಎಂದು, ಮೂರು ಅಂಚೆ ಸ್ವಿಕೃತಿ ಪತ್ರ ಹಾಜರು ಪಡಿಸಿದ್ದು ಅವುಗಳನ್ನು ನಿಪಿ 20 ರಿಂದ 22 ಎಂದು, ಕಮಿಷನರ್ ಸಿಟಿ ಕಾರ್ಪೊರೇಶನ್ ಬೆಳಗಾವಿ ಇವರ ಆದೇಶದ ದೃಡಿಕೃತ ನಕಲು ಹಾಜರು ಪಡಿಸಿದ್ದು ಅದನ್ನು ನಿಪಿ 23 ಎಂದು, ಅಪೀಲ ನಂ. 6/2017/18 ರ ಆದೇಶದ ದೃಡಿಕೃತ ನಕಲು ಹಾಜರು ಪಡಿಸಿದ್ದು ಅದನ್ನು ನಿಪಿ 24 ಎಂದು ಗುರುತಿಸಲಾಯಿತು.

**ಹೆಚ್ಚಿನ ದಾಖಲೆಗಳನ್ನು ಗುರುತಿಸಿಕೊಳ್ಳಲು ಸಮಯ ಕೋರಿದ್ದು ಮುಂದೂಡಲಾಯಿತು. (ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಗಣಕೀಕೃತದಿಂದ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ ಸರಿ ಇದೆ**

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ**
**ನ್ಯಾಯಾಲಯ ಬೆಳಗಾವಿ.**

ಓ.ಕೆ.ಒ.ಸ.ಮಾ.

ಪ್ರತಿವಾದಿಯರು ಗೈರು ಹಾಜರಿದ್ದು ಏಕತರ್ಫಿ ಇರುವದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.